**CC 110/2016**
**PW.1**

**ದಿಃ 07.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ</u>   ಆರೋಪಿ ಪರ ಶ್ರೀ ಎಲ್.ಎಂ.ಎನ್. ವಕೀಲರಿಂದ**

ನಿಪಿ-1 ದೂರನ್ನು ನಾನೇ ಬರೆದಿರುತ್ತೇನೆ. ಘಟನೆಯ ಸಂದರ್ಭದಲ್ಲಿ ಕತ್ತಿಹೊಸಹಳ್ಳಿ 18 ಅಡಿ ಅಗಲದ ರಸ್ತೆ ಆಗಿತ್ತು ಎಂದರೆ ಸರಿ. ಘಟನಾ ಸ್ಥಳವು ಮೇಲ್ಮುಖವಾಗಿ ಇದ್ದಂತಹ ರಸ್ತೆ ಆಗಿತ್ತು ಎಂದರೆ ಸರಿ. ಆರೋಪಿಯು ಟ್ಯಾಂಕರ್ ಲಾರಿಯನ್ನು ಸದರಿ ರಸ್ತೆಯಲ್ಲಿ ನಿಧಾನವಾಗಿ ಚಲಾಯಿಸಿಕೊಂಡು ಹೋಗುತ್ತಿದ್ದ ಎಂದರೆ ಸರಿಯಲ್ಲ. ಘಟನೆಯ ದಿನ ನಾನು ಅಂಗಡಿಗೆ ನಾನು ಟೀ ಕುಡಿಯಲು ಬಂದಿದ್ದೆ. ವೆಂಕಟೇಶ್ ಮೂರ್ತಿರವರ ಟೀ ಅಂಗಡಿಯು ದಕ್ಷಿಣ ದಿಕ್ಕಿನಲ್ಲಿ ಇದೆ ಎಂದರೆ ಸರಿ. ನಾನು ಟೀಯನ್ನು ಕುಡಿಯುವಾಗ ರಸ್ತೆಯ ಕಡೆ ಮುಖ ಮಾಡಿಕೊಂಡು ನಿಂತಿದ್ದೆ. ಮೃತ ಬಾಲಕರು ತರಬನಹಳ್ಳಿ ಗ್ರಾಮದವರು ಎಂದರೆ ಸರಿ. ತರಬನಹಳ್ಳಿಯಿಂದ ಮುಖ್ಯರಸ್ತೆಗೆ ಬರುವಾಗ ಮುಖ್ಯ ರಸ್ತೆಯಲ್ಲಿ ಓಡಾಡುವ ವಾಹನವು ಕಾಣುವುದಿಲ್ಲ ಎಂದರೆ ಸರಿ. ಘಟನೆಯ ಸಂದರ್ಭದಲ್ಲಿ ಮೃತ ಬಾಲಕರು ಸೈಕಲ್ ನಲ್ಲಿ ವೇಗವಾಗಿ ಮುಖ್ಯ ರಸ್ತೆಗೆ ನುಗ್ಗಿದ್ದರಿಂದ ಗಾಡಿ ಚಾಲಕನು ಅಪಘಾತ ತಪ್ಪಿಸಲೆಂದೇ ಬಲಭಾಗದಲ್ಲಿ ಬಂದು ಚಲಾಯಿಸುತ್ತಿದ್ದು ಆದರೂ ಅಪಘಾತವಾಗಿರುತ್ತದೆ ಎಂದರೆ ಸರಿ. ಅಪಘಾತವವು ಆರೋಪಿಯ ತಪ್ಪಿನಿಂದ ಆಗಿರುವುದಿಲ್ಲ ಬಾಲಕರು ವೇಗವಾಗಿ ತಮ್ಮ ಸೈಕಲ್ ಅನ್ನು  ಮುಖ್ಯ ರಸ್ತೆಗೆ ನುಗ್ಗಿಸಿ ತಂದಿದ್ದರಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ಮೃತ ಬಾಲಕರಿಗೆ ಸಹಾಯವಾಗಲೆಂದು ಹಾಗೂ ವಿಮೆ ಹಣ ದೊರೆಯಲಿ ಎಂದು ಆರೋಪಿಯ ತಪ್ಪಿನಿಂದ ಅಪಘಾತವಾಗಿದೆ ಎಂದು ನಾನು ಸುಳ್ಳು ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ಥಳದಲ್ಲಿ ಇಲ್ಲದೇ ಇರುವುದರಿಂದಲೇ ಆರೋಪಿಯನ್ನು ಗುರುತಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ಸ್ಥಳ ಪಂಚನಾಮೆಯನ್ನು ಮಾಡಿಲ್ಲ, ಠಾಣೆಯಲ್ಲಿ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನ ರೀತ್ಯಾ ಬೆರಳಚ್ಚುಗಾರರಿಂದ ಗಣಕಯಂತ್ರದಲ್ಲಿ ಮುದ್ರಿಸಲಾಯಿತು)**

**ಓ ಹೇ ಕೇ ಸ ಇದೆ**

**ಅಪರ ಸಿವಿಲ್   ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**